ಅಸಲು ದಾವಾ ಸಂಖ್ಯೆ 68/2020

ಡಿ ಡಬ್ಲ್ಯೂ: 1

**<u>ದಿನಾಂಕ : 12.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ – ವಾದಿಗಳ ಪರ ಶ್ರೀ ಎನ್ ಆರ್ ಕೆ ವಕೀಲರಿಂದಃ</u>**

ನಾನು ಹಾಜರು ಪಡಿಸಿರುವ ನಿಡಿ-1 ರ ಕ್ರಯಪತ್ರದಲ್ಲಿ ನಮೂದು ಮಾಡಿರುವ ವಿಸ್ತೀರ್ಣದ ಸ್ವತ್ತನ್ನು ಮಾರಾಟ ಮಾಡಲು ಅವರಿಗೆ ಯಾವ ರೀತಿ ಹಕ್ಕು ಬಂದಿರುತ್ತದೆ ಎಂದು ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ನಿಡಿ–1 ಕ್ರಯಪತ್ರವನ್ನು ಬರೆಸಿಕೊಳ್ಳುವ ಮೊದಲು ಅವರ ಹೆಸರಿನಲ್ಲಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವ ಯಾವ ದಾಖಾತಿಗಳು ಇರುತ್ತವೆ ಎಂದು ಪರಿಶೀಲಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮುನ್ಸಿಪಾಲಿಟಿ ದಾಖಲಾತಿಯಲ್ಲಿ ಅವರ ಹೆಸರು ನಮೂದಾಗಿರುವುದನ್ನು ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪೂರ್ವ ಮಾಲೀಕರಿಗೆ ಸ್ವತ್ತು ಮಾರಾಟ ಮಾಡುವ ಸಮಯದಲ್ಲಿ ಪಿತ್ರಾರ್ಜಿತವಾಗಿ ಬಂದಿರುತ್ತದೆ ನಾನು ಆ ದಾಖಲಾತಿಗಳನ್ನು ನೋಡಿರುತ್ತೇನೆ. ನಿಡಿ–1 ದಾಖಲಾತಿಯ ಆಧಾರದ ಮೇರೆಗೆ ನಿಡಿ–2 ದಾಖಲಾತಿಯನ್ನು ಪಡೆದು ಕೊಂಡಿದ್ದೇನೆ ಎಂದರೆ ಸರಿ. ನಿಡಿ–1 ರಲ್ಲಿ ನಮೂದು ಮಾಡಿರುವ ವಿಸ್ತೀರ್ಣದ ಸ್ವತ್ತನ್ನು ಮಾರಾಟ ಮಾಡಲು ನನ್ನ ಪೂರ್ವ ಮಾಲೀಕರಿಗೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಹಾಗಾಗಿ ಸದರಿ ಸ್ವತ್ತಿನಲ್ಲಿ ನನಗೆ ಕಟ್ಟಡ ನಿರ್ಮಾಣ ಮಾಡಲು ಹಕ್ಕ ಇಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಾ ದಾಖಲಾತಿ ನೋಡಿ ತೆಗೆದುಕೊಂಡಿದ್ದೇನೆ.

**<u>ಮರು ವಿಚಾರಣೆಃ ಇಲ್ಲ.</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

( ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ